ಬೆಳಿಗ್ಗೆ ಸ್ಟೇಟ್ ಥಿಯೇಟರಿನಲ್ಲಿ ನಡೆಯಲಿದ್ದ ಅಬೋರಿಜಿನ್ನರ ನಾಟಕದ ನೆನಪಾಗಿ ತಕ್ಷಣ ಸಂಜೀವನನ್ನು ಜೊತೆಗೆ ಬರಲು ಹೇಳಿದೆ. ಅವನು ಯೋಚಿಸಿ ಶನಿವಾರ ಅದೇ ಸಮಯಕ್ಕೆ ಹೆಂಡತಿ ಮಗನ ಜೊತೆ ಕಾಂಗರೂಗಳಿಗೆ ಕ್ಯಾರೆಟ್ ತಿನ್ನಿಸುವ ಅವಕಾಶವಿದ್ದಂತ ಪಾರ್ಕ್ ಒಂದಕ್ಕೆ ಹೋಗುವ ಯೋಜನೆಯಿರುವುದಾಗಿ ಹೇಳಿ ನನ್ನ ಆಮಂತ್ರಣವನ್ನು ನಮ್ರವಾಗಿ ನಿರಾಕರಿಸಿದ. ಸ್ವಲ್ಪ ಹೊತ್ತಿನ ನಂತರ ನಮ್ಮ ಕ್ಯೂಬಿಕಲ್ಲನ್ನು ಹಾದು ಹೋಗುತ್ತಿದ್ದ ಸಿಡಿಜಿ ನನ್ನ ಟೇಬಲ್ಲಿನ ಮೇಲಿದ್ದ ಕಾಫ್ಕಾನ ಪುಸ್ತಕವನ್ನು ನೋಡಿ ನಿಂತ. ನೀಲಿ ಬಣ್ಣದ ಲೂಸಾದ ಶರ್ಟನ್ನು ಹಾಕಿದ್ದ. ಬಳುಕುತ್ತಾ ಬಂದು ಕ್ಯೂಬಿಕಲ್ಲಿನ ಗೋಡೆಗೆ ಒರಗಿ, ಕಾಲುಗಳನ್ನು ಕ್ರಾಸಾಗಿಟ್ಟು, ನನ್ನೆಡೆಗೆ ಬಾಗಿದಾಗ ಅರ್ಧನಾರೀಶ್ವರನಂತೆ ಕಂಡ. ನಾನು ಏನೂ ಹೇಳುವ ಮೊದಲೇ **"I just love Kafka!"** ಎಂದು ಉದ್ಗರಿಸಿದ. ಪುಸ್ತಕವನ್ನು ಕೈಗೆತ್ತಿಕೊಂಡು ಮುಖಪುಟವನ್ನು ಪರಿಶೀಲಿಸಿ, ನಂತರ ತಿರುಗಿಸಿ ಬ್ಲರ್ಬನ್ನು ಓದಿ ಮತ್ತೊಮ್ಮೆ ಅಭಿಮಾನದಿಂದ "ಉಫ್!" ಎಂದು ಪುಸ್ತಕವನ್ನು ಮತ್ತೆ ಡೆಸ್ಕಿನ ಮೇಲಿಟ್ಟು ನನ್ನ ಭುಜವನ್ನು ಮೆಲ್ಲಗೆ ಮುಟ್ಟಿ ಮಿಂಚಿನಂತೆ ಹೊರಟುಹೋದ. ಬಿಳೀ ಶರ್ಟು, ಕಪ್ಪು ಪಾಂಟು, ಕಪ್ಪು ಬ್ಲೇಜರ್ ಹಾಕಿದವರ, ಗ್ರೀನ್ ಟೀ ಕುಡಿಯುವವರ, ಹೇರ್ ಜೆಲ್ಲನ್ನು ಹಚ್ಚಿದ ಕೂದಲನ್ನು ನಾಜೂಕಾಗಿ ತೀಡಿ ಬಾಚಿದವರ, ಸಂಜೆ ಆಫೀಸು ಮುಗಿದ ಕೂಡಲೆ ಗಾಲ್ಫ್ ಆಡಲು ಹೋಗುವವರ ನಡುವೆ ಅವನ ವಕ್ರ ನಡೆನುಡಿಯಲ್ಲಿ ಏನೋ ವಿಚಿತ್ರ ಸುಖ ಹಾಗೂ ಗೆಲುವಿತ್ತು. ಅಸೂಯೆ ಹುಟ್ಟಿಸುವಂತಹ ನಿರ್ಭಿಡೆಯಿತ್ತು.

★★★

ರಾತ್ರಿ ಒಂಬತ್ತರ ರೈಲು ಹಿಡಿದು ನನ್ನ ಅಪಾರ್ಟ್‌ಮೆಂಟಿನ ಬಳಿಯಿದ್ದ ಸ್ಟೇಷನ್ ತಲುಪಿದಾಗ ಸುಮಾರು ಹತ್ತಾಗುತ್ತಿತ್ತು. ಮನೆಯಲ್ಲಿ ಅಡುಗೆ ಮಾಡಿಲ್ಲದ್ದು ನೆನಪಾಗಿ ಹ್ಯಾರಿಸ್ ಪಾರ್ಕಿನ ರೆಸ್ಟೊರೆಂಟಿಗೆ ಧಾವಿಸಿದೆ. ಪೂರಿ ತಿನ್ನುತ್ತಾ ಕೂತಿದ್ದ ಒಂಟಿ ಗಿರಾಕಿಯನ್ನು ನೋಡಿದಾಗ ಹೆಚ್ಚೇನೂ ವ್ಯಾಪಾರವಿಲ್ಲದ ದಿನವೆನ್ನಿಸಿತು. ರೆಸ್ಟೊರೆಂಟಿನ ಬಾಗಿಲಿಗೆ ಬೆನ್ನು ಮಾಡಿ ಕೂತಿದ್ದ ಆಂಟಿ ಯಾವುದೋ ತಮಿಳು ಪಿಚ್ಚರನ್ನು ನೋಡುತಿದ್ದರು. ಕೌಂಟರಿನ ಎದುರಿದ್ದ ಟೇಬಲ್ಲಿನಲ್ಲಿ ಅವರ ಇಬ್ಬರು ಮಕ್ಕಳೂ ಕೂತು ಆಟವಾಡುತ್ತಿದ್ದರು. ಏದುಸಿರು ಬಿಡುತ್ತಾ ಬಂದ ನನ್ನನ್ನು ನೋಡಿ ಟೀವಿ ನೋಡುತ್ತಿದ್ದ ಅಮ್ಮನನ್ನು ಕೈಮಾಡಿ ಕರೆದರು. ಆಂಟಿ ತಿರುಗಿ ನನ್ನ ನೋಡಿ ಮಂಡಿಯ ಮೇಲೆ ಕೈಯ್ನೂರಿ ಪ್ರಯಾಸದಿಂದ ಏಳುತ್ತಾ, "ಇವತ್ತು ತುಂಬಾ ಕ್ವಯೆಟ್ಟಾಗಿದೆ... ಜನವೇ ಇಲ್ಲ... **what would you like?"** ಎಂದರು. ದಾಲ್ ಪಾಲಕ್ ಹಾಗೂ ಚಪಾತಿ ಹೇಳಿ, ಕೈ ತೊಳೆದು ಅಂತೂ ಏನೋ ತಿನ್ನಲು ಸಿಕ್ಕಿತೆಂಬ ಸಮಾಧಾನದಿಂದ ಮಕ್ಕಳು ಕೂತಿದ್ದ ಟೇಬಲ್ಲಿನ ಹಿಂದಿನ ಟೇಬಲ್ಲಿನಲ್ಲಿ ಕೂತೆ. ಆಂಟಿ ಆಯಾಸದ ಹೆಜ್ಜೆಗಳಿಡುತ್ತಾ ಊಟದ ತಟ್ಟೆಯನ್ನು ನನ್ನ ಮುಂದಿಟ್ಟರು. ಮಕ್ಕಳನ್ನು ನೋಡಿದ್ದೇ "ರೀಮಾ, **please don't start again!"** ಎಂದು ನಿಟ್ಟುಸಿರು ಬಿಡುತ್ತಾ ಕೌಂಟರಿನಲ್ಲಿ ಕೂತರು. ರೀಮಾ ಅಮ್ಮನ ಮಾತನ್ನು ಕಿವಿಯ ಮೇಲೂ ಹಾಕಿಕೊಳ್ಳದೆ ಒಂದು ಹಳೆಯ ಬಟ್ಟೆಯಲ್ಲಿ ತಾವು ಕೂತಿದ್ದ ಟೇಬಲನ್ನು ಅಚ್ಚುಕಟ್ಟಾಗಿ ಒರೆಸಿದಳು. "ಅಮಲ... **get the bag..."** ಎಂದು ತನ್ನ ತಂಗಿಗೆ ಹೇಳಿದಳು. ಅಕ್ಕನ ಮಾತಿಗೇ ಕಾಯುತ್ತಿದ್ದ ಅಮಲ ಚಕ್ಕನೆ ರೆಸ್ಟೊರೆಂಟಿನ ಹಿಂಬದಿಯಲ್ಲಿದ್ದ ಗರಾಜಿಗೆ ಓಡಿದ್ದು ಕಂಡಿತು. "ಇಂಥಾ ಹುಚ್ಚರನ್ನು ನೀವೆಲ್ಲೂ ನೋಡಿರಲ್ಲಾ ಬಿಡಿ. ಮನೆಯಲ್ಲಿರೋ ಯಾವ ಸಾಮಾನೂ ಬಿಟ್ಟಿಲ್ಲಾ... **madness!"** ಎಂದು ಆಂಟಿ ವಿಚಿತ್ರವಾಗಿ ನಕ್ಕರು. ಅಮಲ ಕಿಟ್ ಬ್ಯಾಗನ್ನು ತನ್ನ ಪುಟ್ಟ ಕೈಗಳಲ್ಲಿ ಹೊತ್ತು ಟೇಬಲ್ಲಿನ ಪಕ್ಕದಲ್ಲಿಟ್ಟಾಗ, ಅವರಿಬ್ಬರೂ ಸೇರಿ ಏನು ಮಾಡುತ್ತಾರೆಂಬ ಕುತೂಹಲವಾಯಿತು.

ರೀಮಾ ಕಿಟ್ ಬ್ಯಾಗಿನಿಂದ ಒಂದು ಬಾಟಲ್ ಫೆವಿಕಾಲ್ ಮತ್ತು ಒಂದು ಬಾಟಲ್ ಶೇವಿಂಗ್